ಹೋಗಿದ್ದಾರೆ. ಇಂಥ ರೀತಿಯಲ್ಲಿ ಬಾಕಿ ವಸೂಲಾತಿಯನ್ನು ಮಾಡುತ್ತಾ ಇದ್ದರೆ ಮುಂದೆ ರೈತರ ಪರಿಸ್ಥಿತಿಯು ಏನಾದೀತು ಈ ಬಗ್ಗೆ ಕೇಂದ್ರದವರದ್ದು ಒಂದು ನೀತಿ ಇದೆ. ಅವರು ಒಂದು ರೀತಿಯಲ್ಲಿ ರಿಯಾಯಿತಿಯನ್ನು ಕೊಡುತ್ತೇವೆ ಎಂದು ಹೇಳಿದ್ದಾರೆ. ಆದರೆ ಇಲ್ಲಿ ರೈತರಿಗೆ ಒಂದೂ ರೀತಿಯಲ್ಲಿ ಅನುಕೂಲ ಮಾಡಿಕೊಡಬೇಕೆನ್ನುವ ಒಂದು ಸೌಜನ್ಯವೂ ಕೂಡ ಸರಕಾರಕ್ಕೆ ಇದ್ದಹಾಗೆ ಸ್ಪಷ್ಟವಾಗಿ ಕಾಣುತ್ತಿಲ್ಲ. ಅಷ್ಟರಲ್ಲಿ ಲಕ್ಷಾಂತರ ರೈತ ಕುಟುಂಬಗಳನ್ನು ಭಿಕಾರಿಗಳನ್ನಾಗಿ ಮಾಡುವಂಥ ಚಟುವಟಿಕೆಗಳು ನಡೆಯಬಹುದು ನಮ್ಮ ಅಧಿಕಾರಿಗಳು ಸಾಮಾನ್ಯರೇನೂ ಅಲ್ಲ. ಆ ಕಾರಣಕ್ಕೆ ಇಂಥ ಒಂದು ಪರಿಸ್ಥಿತಿಯಲ್ಲಿ ಅನಿವಾರ್ಯವಾಗಿ ನಾವು ಚರ್ಚೆ ಮಾಡುವುದಕ್ಕಿಂತ ಸಭಾತ್ಯಾಗ ಮಾಡುವುದು ಉತ್ತಮ ಎಂದು ತಿಳಿದುಕೊಂಡು ಸಭಾತ್ಯಾಗ ಮಾಡುತ್ತೇವೆ.

(ರೈತ ಸಂಘದ ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ಎಂ.ಪಿ. ವೆಂಕಟೇಶ್.—ಮಾನ್ಯ ಸಭಾಧ್ಯಕ್ಷರೆ, ಮಾನ್ಯ [illegible] ಮಂತ್ರಿಯವರು ಆದು ನಮ್ಮ ಪ್ರಣಾಳಿಕೆಯಲ್ಲಿಲ್ಲ, ನಾವು ರೈತರ ಸಾಲ ಮನ್ನಾ ಮಾಡುವುದಿಲ್ಲ ಎನ್ನುವ ಬಗ್ಗೆ ಹೇಳಿದರು. ಆ ಬಗ್ಗೆ ಕೇಂದ್ರ ಸರಕಾರಕ್ಕೆ ಶಿಫಾರಸ್ಸು ಮಾಡುತ್ತೇವೆಂದು ಪ್ರಣಾಳಿಕೆಯಲ್ಲಿ ಹೇಳಿದ್ದೇವೆ ಎಂದು ಹೇಳಿದರು. ಒಂದೂ ಕಡೆ ಸ್ಪಷ್ಟವಾಗಿ ಸಾಲವನ್ನು ಮನ್ನಾ ಮಾಡುವುದಿಲ್ಲ ಎಂದು ಹೇಳಿದ್ದರೂ ಇಲ್ಲಿ ಆದು ನಮ್ಮ ಕಡೆಯಿಂದ ಆಗುವುದು ಕಷ್ಟ ಎಂಬ ರೀತಿಯಲ್ಲಿ ಹೇಳಿಕೊಂಡಿದ್ದಾರೆ. ಒಟ್ಟಿನಲ್ಲಿ ಕೇಂದ್ರ ಮತ್ತು ರಾಜ್ಯ ಸರಕಾರಗಳ ನಡುವೆ ಬಿದ್ದ ರೈತರು ಬಹಳ ತೊಂದರೆಗೀಡಾಗಿದ್ದಾರೆ. ಕೇಂದ್ರ ಸರಕಾರದವರು ಸಾಲ ಮನ್ನಾ ಮಾಡುತ್ತೇವೆಂದು ಹೇಳಿದ್ದರು ಎಂದು ಹೇಳಿದ್ದಾರೆ. ಈ ಸಭೆಯಲ್ಲಿ ಚರ್ಚೆ ಮಾಡಿದಾಗ ನಾನು ದೆಹಲಿಗೆ ಹೋಗಿ ವಿಚಾರ ಮಾಡುತ್ತೇನೆ ಎಂದು ಹೇಳಿದರು. ಅಲ್ಲಿ ಇವರಿಗೆ ಅವರು ಏನು ವಿಚಾರ ಹೇಳಿದ್ದಾರೆ ಎನ್ನುವ ಬಗ್ಗೆ ಹೇಳಿದ್ದಾರೆ. ಇದು ಕಷ್ಟವಾಗಿದೆ, ನಿಧಾನವಾಗಿ ಐದು ವರ್ಷಗಳಲ್ಲಿ ಮಾಡುತ್ತೇವೆ ಎಂದು ಹೇಳಿದ್ದಾರೆ ಎಂದರು. ಅವರೂ ಕೂಡ ಸ್ಪಷ್ಟವಾಗಿ ನಾವು ಮನ್ನಾ ಮಾಡುವುದಿಲ್ಲ ಎಂದಿಲ್ಲ. ಆದರೆ ಇವರು ಮಾಡುವುದಿಲ್ಲ ಎಂದು ನೇರವಾಗಿ ಹೇಳಿದ್ದಾರೆ. ಆದರೆ ಈಗ ವಸೂಲಾತಿಗೆ ಆದೇಶ ಕೊಟ್ಟಿದ್ದಾರೆ. ಹೀಗಾಗಿ ರೈತರಿಗೆ ಮಾಧ್ಯದಲ್ಲಿ ಬಹಳ ಕಷ್ಟವಾಗಿದೆ. ಸದನದಲ್ಲಿ ಶಾಸಕರು ಈ ಬಗ್ಗೆ ಒತ್ತಾಯ ಮಾಡುತ್ತಿದ್ದಾರೆ. ಆ ಕಾರಣಕ್ಕಾಗಿ ನಿಮ್ಮ ಸ್ಪಷ್ಟವಾದ ನಿಲುವು ಕೊಡಿ, ಇಲ್ಲವಾದಲ್ಲಿ ನನಗೆ ಕಷ್ಟವಾಗುತ್ತದೆ, ನಿಮ್ಮ ಪಕ್ಷದವರು, ನಮ್ಮ ಪಕ್ಷದವರು ಹೇಳುತ್ತಾ ಇದ್ದಾರೆ, ರೈತರು ಕಷ್ಟದಲ್ಲಿದ್ದಾರೆ ಎಂದು ಸ್ಪಷ್ಟವಾಗಿ ಒತ್ತಾಯ ಮಾಡಿದ್ದರೆ ಅಥವಾ ಸ್ಪಷ್ಟ ನಿಲುವು ತೆಗೆದುಕೊಂಡಿದ್ದರೆ ಒಂದು ಪರಿಹಾರ ಆಗುತ್ತಿತ್ತು. ಆದರೆ ಅಲ್ಲಿ ಇವರು ಯಾವುದೇ ಒತ್ತಡವನ್ನು ತಾರದೆ ಅವರು ಹೇಳಿದ್ದನ್ನು ಕೇಳಿಕೊಂಡು ಬಂದು ಇಲ್ಲಿ ಹೇಳಿದರೆ, ಇದರಿಂದಾಗಿ ಸ್ಪಷ್ಟ ಚಿತ್ರಣ ಇಲ್ಲದೆ ರೈತರಿಗೆ ಬಹಳ ತೊಂದರೆಯಾಗುತ್ತಾ ಇದೆ. ಈಗ ಸಾಲ ವಸೂಲಾತಿ ನಿಲ್ಲಿಸದಿದ್ದರೆ ಬಹಳ ಕಷ್ಟವಾಗುತ್ತದೆ. ಆದುದರಿಂದ ಕೇಂದ್ರ ಸರಕಾರದ ಬಜೆಟ್ ಸೆಷನ್‌ನಲ್ಲಿ ಈ ಇತ್ಯರ್ಥ ಮಾಡುವವರೆಗೆ ಎರಡು ತಿಂಗಳು ಸಾಲ ವಸೂಲಿ ನಿಲ್ಲಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಹೆಚ್. ಏಕಾಂತಯ್ಯ.—ಮಾನ್ಯ ಅಧ್ಯಕ್ಷರೆ, ರೈತರ ಸಾಲವನ್ನು ಮಜಾ ಮಾಡಬೇಕೆನ್ನುವ ವಿಚಾರದಲ್ಲಿ ಒಂದು ರಾಷ್ಟ್ರೀಯ ನೀತಿಯನ್ನು ಅನುಸರಿಸಬೇಕೆಂಬ ಮಾತನ್ನು ಹೇಳಿದ್ದಾರೆ. ಎಲ್ಲಾ ರಾಜಕೀಯ ಪಕ್ಷೆಗಳ ಧುರೀಣರು ಮತ್ತು ಅರ್ಥಶಾಸ್ತ್ರಜ್ಞರು ಈ ಬಗ್ಗೆ ಚರ್ಚೆ ಮಾಡಿ ಒಂದು ತೀರ್ಮಾನಕ್ಕೆ ಬರಬೇಕೆಂದು ಮಾನ್ಯರು ಹೇಳಿದ್ದಾರೆ. ಅಂತೆಯೇ ಕೇಂದ್ರದವರು ಹಿಂದೆ ಕೊಟ್ಟ ಬಡ್ಡಿ ರಿಯಾಯಿತಿಯನ್ನು ರಾಜ್ಯದಲ್ಲಿ ಹಿಂದೆ ಇದ್ದ ಸರಕಾರ ೨೯-೩-೧೯೮೯ರಲ್ಲಿ ರದ್ದು ಮಾಡಿತು ಎಂದು ಹೇಳಿದ್ದಾರೆ. ಅದು ಸರಿಯೆಲ್ಲ. ಬಡ್ಡಿ ರಿಯಾಯಿತಿ ಬಗ್ಗೆ ಹಿಂದಿನ ಸರಕಾರ ೧೯೮೮ರಲ್ಲಿ ಮತ್ತು ಆದಕ್ಕಿಂತ ಮೊದಲು ಏನು ಆದೇಶವನ್ನು ಹೊರಡಿಸಿತ್ತು ಆದನ್ನು ಹೊರಡಿಸಿದ ಮೇಲೆ ಅಂದು ಇದ್ದಂಥ ಕೇಂದ್ರ ಸರಕಾರ ಮತ್ತು ನಬಾರ್ಡ್‌ನವರು ಇಂದು ಮಾಡಿದಂಥ ರೀತಿಯಲ್ಲಿ ಅಂದೂ ಕೂಡ ಅನೇಕ ಅಡ್ಡಿ ಆತಂಕಗಳನ್ನು ಮಾಡಿದರು, ಆದರೆ ನಾವು ಅಂಥ ಪರಿಸ್ಥಿತಿಯಲ್ಲೂ ಕೂಡ ಬಡ್ಡಿ ರಿಯಾಯಿತಿಯನ್ನು ಮುಂದುವರಿಸಿಕೊಂಡು ಬಂದಿದ್ದೆವು. ನಬಾರ್ಡ್‌ನವರಿಗೆ ಒತ್ತಾಯಪೂರ್ವಕವಾಗಿ ಪುನಃ ರೀಫೈನಾನ್ಸ್ ಪಡೆಯಬೇಕೆಂಬ ದೃಷ್ಟಿಯಿಂದ ಅನೇಕ ಸಂದರ್ಭಗಳಲ್ಲಿ ಅನೇಕ ಸಬೂಬುಗಳನ್ನು ಹೇಳಿ ಹಣವನ್ನು ಪಡೆಯಲು ಪ್ರಯತ್ನಿಸಿದ್ದೇವೆ.

ಅಂತಹ ಒಂದು ಸಬೂಬಾಗಿ ೨೯-೩-೧೯೮೯ರಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಕಾಗದ ಬರೆದಿರಬಹುದೇ ಹೊರತು ಅವಶ್ಯಕತೆಯ ದಿವಸ ಸರ್ಕಾರ ರದ್ದು ಮಾಡಿದೆ ಎನ್ನುವುದು ಸರಿಯಲ್ಲ. ಶ್ರೀ ವೀರೇಂದ್ರ ಪಾಟೀಲರು ಮುಖ್ಯ ಮಂತ್ರಿಗಳಾದ ಮೇಲೆ ಈ ಸರ್ಕಾರ ಆ ಆದೇಶವನ್ನು ರದ್ದು ಪಡಿಸಿದೆ. ಇದು ಹೌದೆ, ಅಲ್ಲವೇ ಎಂದು ಮುಖ್ಯಮಂತ್ರಿಗಳು ತಿಳಿಸಬೇಕು.